## ಹೇಗೆ ಮರೆಯಲಿ ಈ ನಂಟು?

ಚಿಕ್ಕಂದಿನಿಂದ ನಾನು 'ಸುಧಾ' ಓದುಗಳು. ನನ್ನ ಚಿಕ್ಕಮ್ಮ ಸುಧಾ ಪತ್ರಿಕೆ ತರುತ್ತಿದ್ದರು. ಡಾಬು, ಆಜಾದ್, ಸೂಜಾ, ಮಜನು ಇವರನ್ನೆಲ್ಲಾ ಮರೆಯುವುದಾದರೂ ಹೇಗೆ? ನಂತರದ ದಿನಗಳಲ್ಲಿ ವಿಚಾರಪೂರ್ಣ ಲೇಖನಗಳನ್ನು ಓದುತ್ತಾ ಬಂದೆ. ಪ್ರತೀ ವಾರ ಸುಧಾಳಿಗಾಗಿ ಕಾಯುವಂತಾಗಿದೆ. ವಜ್ರಮಹೋತ್ಸವದ ಸಂಭ್ರಮದಲ್ಲಿರುವ ಸುಧಾ ಹೀಗೆಯೇ ಯಶಸ್ವಿಯಾಗಿ ಮುನ್ನಡೆಯಲಿ.

— ಭಾನುಮತಿ ಭೋಜರಾಜ್, ಮಂಗಳೂರು

## 'ಸುಧಾ' ಬೆಸುಗೆ

ನನ್ನ ಬಾಲ್ಯದಲ್ಲಿ 'ಸುಧಾ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಡಾಬು ಫ್ಯಾಂಟಮ್ ಓದಲು ಕಾತರದಿಂದಿರುತ್ತಿದ್ದೆ. ನನಗಾಗ 8 ವರ್ಷ. ನಂತರದ ವರ್ಷಗಳಲ್ಲಿ ಹತ್ತು ಹಲವು ಉತ್ತಮ ಧಾರಾವಾಹಿಗಳನ್ನು ಓದಿದ ನೆನಪು. ಹಿಂದೆ ವಾರದ ವ್ಯಕ್ತಿ, ರಂಗೋಲಿ ಹಾಗೂ ಕಾಮಧೇನು, ಹೀಗೆ ಹಲವು ಅಂಕಣಗಳು ಪ್ರಕಟಗೊಳ್ಳುತ್ತಿದ್ದವು. ನಮ್ಮ ಜೀವನದೊಂದಿಗೆ ಸುಧಾ ಬೆಸೆದುಕೊಂಡಂತೆ ಅನಿಸುತ್ತಿದೆ.

—ಚಿನಕುರಳಿ ಎಸ್. ಶ್ರೀನಿವಾಸ, ಬೆಂಗಳೂರು

## ಸಂತಸದ ಸುಧೆ...

ಗುರುವಾರವನ್ನೇ ಕಾಯುವ ನನ್ನಲ್ಲಿ, ಸುಧಾ ಸಿಕ್ಕ ತಕ್ಷಣ ಸಂತಸದ ಸುಧೆಯೇ ಹರಿದಂತಾಗುತ್ತದೆ. ಮೊದಲ ಸಂಚಿಕೆಯಿಂದಲೂ ನಾನು ಸುಧಾ ಪತ್ರಿಕೆ ಓದುತ್ತಾ ಬಂದಿದ್ದೇನೆ. ಅನುಪಮಾ ನಿರಂಜನ ಅವರ ಅದ್ಭುತ ಕಾದಂಬರಿ 'ಸ್ನೇಹ ಪಲ್ಲವಿ' ಓದಿದ ನೆನಪು ಇನ್ನೂ ಹಸಿರಾಗಿದೆ. ಮುಂದೆ ಅದು ಸಿನಿಮಾ ಕೂಡ ಆಯಿತು. ಈ ಹಿಂದೆ ಪತ್ರಿಕೆಯಲ್ಲಿ ಪ್ರಕಟಿಸಿದ ಮೌಲ್ಯಯುತ ಕಾದಂಬರಿಗಳನ್ನು ಮರುಪ್ರಕಟಣೆ ಮಾಡಬೇಕು ಎನ್ನುವ ಕೆಲ ಓದುಗರ ಅಭಿಮತಕ್ಕೆ ನನ್ನ ಸಹಮತವೂ ಇದೆ.

—ಸನ್ಮತಿ ಉಪಾಧ್ಯ, ಬೆಳಗಾವಿ

**60ರ ಹೊಸ್ತಿಲಲ್ಲಿರುವ 'ಸುಧಾ' ಜೊತೆಗಿನ ಓದುಗರ ಒಡನಾಟ ಪತ್ರಗಳ ರೂಪದಲ್ಲಿ ಪ್ರಕಟಗೊಂಡಿದೆ.**




## ಆಪ್ತ ಸಂಗಾತಿ

60ರ ಹರೆಯಕ್ಕೆ ಕಾಲಿಟ್ಟ ಸುಧಾ, ಕಾಲಕ್ಕೆ ತಕ್ಕಂತೆ ರೂಪುಗೊಳ್ಳುತ್ತಾ ನಾವೀನ್ಯವನ್ನು ಮೈಗೂಡಿಸಿಕೊಂಡ ಹುರುಪಿನ ಹುಡುಗಿಯಂತಿದ್ದಾಳೆ. ನಾನು ನಲವತ್ತು ವರ್ಷಗಳಿಂದ ಸುಧಾ ಪತ್ರಿಕೆಯನ್ನು ಓದುತ್ತಿದ್ದೇನೆ. ನನ್ನಲ್ಲಿ ಓದುವ, ಬರೆಯುವ ಹವ್ಯಾಸವನ್ನು ಬೆಳೆಸಿದ್ದೇ ಸುಧಾ ಪತ್ರಿಕೆ. ಸುಧಾ ನನಗೆ ಆಪ್ತ ಗೆಳತಿಯಿದ್ದಂತೆ. ಈ ನನ್ನ ಸಂಗಾತಿಗೆ ಶುಭಾಶಯಗಳು...

—ಶಾಲಿನಿ ನಾಯಕ್, ಬೆಂಗಳೂರು

## ಕನ್ನಡಾಂಬೆಯ ಪ್ರತೀಕ

ವಜ್ರದ ಕಿರೀಟ ಧರಿಸಿದ ಸಂತಸ ಎಂದಿಗೂ ಸುಧಾ ಜೊತೆಗಿರಲಿ...

'ಸುಧಾ' ನಮಗೆ ಕನ್ನಡಾಂಬೆಯ ಪ್ರತೀಕ. ನಮ್ಮ ಅಜ್ಜನ ಮನೆಯ ಗ್ರಂಥ ಭಂಡಾರದಲ್ಲಿ ಮೊದಲ, ಅಂದರೆ 11–1–1965ರಲ್ಲಿ ಅರಳಿದ ಸಂಚಿಕೆ ಇದೆ. ನಮ್ಮ ಅಜ್ಜ ಸುಧಾ ಪತ್ರಿಕೆಗಳನ್ನು ಜೋಪಾನವಾಗಿ ಇಟ್ಟಿದ್ದ. ಸುಧಾದಲ್ಲಿ ಪ್ರಕಟಗೊಳ್ಳುತ್ತಿದ್ದ ಲೇಖನಗಳು, ಕತೆ ಕವಿತೆ, ಕಾದಂಬರಿ, ಚಿಂತನೆಯ ಆಯಾಮಗಳ ಬರಹಗಳು ಸಾಕಷ್ಟು ಜ್ಞಾನ ಕೊಟ್ಟಿವೆ. ನನ್ನ ನೆಚ್ಚಿನ ಸುಧಾದಿಂದ ನನಗೆ ಬಹುಮಾನ ದೊರೆತ ಖುಷಿಯನ್ನೂ ಮರೆಯುವಂತಿಲ್ಲ. ಓದಿನ ದಾಸನಾಗುವಂತೆ ಮಾಡಿದ ಸುಧಾಗೆ ಕೋಟಿ ನಮನ.

—ರಾಜೇಂದ್ರ ಹೆಗಡೆ, ಹಾವೇರಿ

## ಚಿರಕಾಲವಿರಲಿ...

ನನಗೆ ತಿಳಿವಳಿಕೆ ಬಂದಾಗಿನಿಂದಲೂ ಸುಧಾ ನಮ್ಮ ಮನೆಯ ಒಂದು ಭಾಗವೇ ಆಗಿದೆ. ಈಗ 60ನೇ ವರ್ಷಕ್ಕೆ ಕಾಲಿಟ್ಟು ವಜ್ರ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಈ ಸಂಭ್ರಮದಲ್ಲಿ ನಾವು ಭಾಗಿಗಳಾಗುತ್ತಿರುವುದು ಅಪೂರ್ವ ಕ್ಷಣವೆನಿಸುತ್ತಿದೆ. 2001ರಲ್ಲಿ 'ನಿಮ್ಮ ಪುಟ' ವಿಭಾಗದಲ್ಲಿ ನನ್ನ ಮೊದಲ ಬರಹ ಪ್ರಕಟವಾಗಿದ್ದು ಕಂಡು ಪುಳಕಗೊಂಡಿದ್ದೆ. ನಮ್ಮೆಲ್ಲರ ನೆಚ್ಚಿನ ಸುಧಾ ಚಿರಕಾಲ ಬಾಳಲಿ ಎಂದು ಆಶಿಸುತ್ತೇನೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಪ್ರಬುದ್ಧ 'ಸುಧಾ'

ಸುಧಾ ನನ್ನ ಅಚ್ಚುಮೆಚ್ಚಿನ ವಾರಪತ್ರಿಕೆ. ಮೊದಲ ಸಂಚಿಕೆಯಿಂದ ಇಂದಿನವರೆಗೆ ಒಂದು ವಾರವೂ ಬಿಡದೆ ಓದುತ್ತಾ ಬಂದಿದ್ದೇನೆ. ಆಗ ನನಗೆ 15 ವರ್ಷ. ಪಿಯುಸಿ ಓದುತ್ತಿದ್ದೆ. ಮೊದಲ ಸಂಚಿಕೆಯ ಮುಖಪುಟ ಅಮೃತ ಕಳಶ ಹಿಡಿದಿರುವ ಮೋಹಿನಿಯ ಚಿತ್ರವನ್ನು ನೋಡಿ, ಚಿತ್ರಕಲೆಯಲ್ಲಿ ಆಸಕ್ತಿ ಇರುವ ನಾನೂ ಆ ಚಿತ್ರ ಬಿಡಿಸಿದ್ದೆ. ತಿಂಗಳಿಗೂ ಮೊದಲೇ 'ಪ್ರಜಾವಾಣಿ' ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡಿದ್ದ ನೆನಪು, ಪತ್ರಿಕೆಗೆ ಹೆಸರು ಸೂಚಿಸಿದವರಿಗೆ ಬಹುಮಾನವಿದೆ ಎಂದು. ನನಗೆ ಪತ್ರಿಕೆ ಹೇಗಿರಬಹುದೆಂಬ ಕುತೂಹಲ. ಬೆಳಗಾಗುತ್ತಿದ್ದಂತೆ ಪತ್ರಿಕೆ ತರಲು ಅಂಗಡಿಗೆ ಹೋಗಿದ್ದೆ. ಈಗ, ಇಷ್ಟು ಬೇಗ 60 ವರ್ಷವಾಯಿತೇ ಎಂದೆನಿಸುತ್ತಿದೆ. ವಾರವಾರವೂ ಸುಧಾಗಾಗಿ ಕಾದು ಕುಳಿತುಕೊಳ್ಳುತ್ತಿದ್ದೆ. ಹೊಂಗನಸು, ಕಣ್ಮಣಿ, ಮಣ್ಣಿನ ದೋಣಿ, ಮೃಗಶಿರಾ, ಮಹಾಭಾರತ, ಬೆಳದಿಂಗಳ ಬಾಲೆ... ಹೀಗೆ ಸುಮಾರು 30 ಧಾರಾವಾಹಿಗಳನ್ನು ನಮ್ಮ ತಾಯಿ ಸಂಗ್ರಹಿಸಿಟ್ಟಿದ್ದರು. ಅದು ಈಗಲೂ ನನ್ನಲ್ಲಿದೆ. ಕಥೆಗಳ ಚಿತ್ರಗಳನ್ನು ಹುಬ್ಳೀಕರ್ ಹಾಗೂ ಜಿ.ಕೆ. ಸತ್ಯ ಅವರು ಬರೆಯುತ್ತಿದ್ದರು. ಅವರ ಚಿತ್ರಗಳನ್ನು ನೋಡಿ ನಾನೂ ಬರೆಯಲು ಆಸಕ್ತಿ ವಹಿಸಿದೆ.

ಸುಧಾ 60 ವರ್ಷದ ದೀರ್ಘಾವಧಿಯಲ್ಲಿ ತುಂಬಾ ಪ್ರಬುದ್ಧಳಾಗಿ ಬೆಳೆದಿದ್ದಾಳೆ. ಜ್ಞಾನ ಹೆಚ್ಚಿಸುತ್ತಿದ್ದಾಳೆ. ಪತ್ರಿಕೆಯೊಂದಿಗೆ ನನ್ನದು ಅವಿನಾಭಾವ ಸಂಬಂಧ. ಸುಧಾ, ಮುಂದೆ ಮತ್ತಷ್ಟು, ಮಗದಷ್ಟು ವಿಷಯಗಳನ್ನು ಹೊತ್ತು ತರಲಿ ಎಂಬುದು ನನ್ನ ಹೃದಯಾಂತರಾಳದ ಹಾರೈಕೆ.

—ಕೆ.ಎಲ್. ಭಾರತಿ, ತುಮಕೂರು

## ನೂರರ ಸಂಭ್ರಮ ಆಗಲಿ

ಬಾಲ್ಯದಲ್ಲಿ ಡಾಬೂ ರಾಮು, ಆಜಾದ್, ಸೂಜಾ ಓದಿಕೊಂಡು ಮುಂದೆ ಉಷಾ ನವರತ್ನ ರಾಮ್, ಅಶ್ವಿನಿ, ಡಾ. ದೊಡ್ಡೇರಿ ವೆಂಕಟಗಿರಿ ರಾವ್ ಅವರ ಧಾರಾವಾಹಿಗಳಿಂದ ಸೆಳೆಯಲ್ಪಟ್ಟವಳು. ಯಂಡಮೂರಿಯವರ 'ಬೆಳದಿಂಗಳ ಬಾಲೆ' ಓದಿ ಗೆಳೆಯರೊಂದಿಗೆ ಬಿಸಿ ಚರ್ಚೆಯಲ್ಲಿ ತೊಡಗುತ್ತಿದ್ದದ್ದು ಇನ್ನೂ ಹಸಿರು.

ಮೂವತ್ತು ವರ್ಷಗಳ ಹಿಂದೆ, ನನ್ನ 'ಅಸೂಯೆ vs ಪ್ರೀತಿ' ಪ್ರಕಟವಾದದ್ದು ಇದೇ ಪತ್ರಿಕೆಯಲ್ಲಿ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಅಂದಿನ ಯುವ ವೇದಿಕೆ/ಚರ್ಚೆ ಪುಟಗಳಲ್ಲಿ ನನ್ನ ಮಗಳ ಬರಹಗಳೂ ಪ್ರಕಟವಾಗಿ ಅವಳಲ್ಲಿ ಬರೆಯುವ ವಿಶ್ವಾಸ ತುಂಬಿತ್ತು ಎಂಬುದನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಗುರುವಾರಕ್ಕೆ ಕಾತರಿಸುವ, ನಮ್ಮ ಅಮ್ಮನಿಂದ ಹಿಡಿದು, ನನ್ನ ಮೊಮ್ಮಗನವರೆಗೆ ಎಲ್ಲರಿಗೂ ಅಚ್ಚುಮೆಚ್ಚು.

ಸುಧಾ ಇನ್ನಷ್ಟು ಬೆಳೆಯಲಿ... 75, 100ರ ಸಂಭ್ರಮ ಕಾಣಲಿ ಎಂದು ಹಾರೈಸುತ್ತೇನೆ.

—ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು